129

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಉಮಾಶ್ರೀ ಇವರು ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉನ್ನತ ಶಿಕ್ಷಣ ಸಚಿವರ ಉತ್ತರ.**

**:ಪ್ರಶ್ನೆ:**

ಭಾಷಾ ಸಂಶೋಧನೆಗೆಂದೇ 32 ವರ್ಷಗಳ ಹಿಂದೆ ಜನ್ಮ ತಳೆದ ಕನ್ನಡ, ಕರ್ನಾಟಕ ಅಸ್ಮಿತೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಇಂದು ಗಂಭೀರ ಹಣಕಾಸು ಕೊರತೆಯಿಂದ ಬಳಲುತ್ತಿದೆ. ಸಂಶೋಧನೆ, ನೌಕರರ ವೇತನ ಪಾವತಿಗೂ ಹಣವಿಲ್ಲದ ದಯನೀಯ ಸ್ಥಿತಿಯಿದೆ. ಸಾಲದೆಂಬಂತೆ ಪ್ರತಿ ವರ್ಷ ಸರ್ಕಾರದಿಂದ ಬಿಡುಗಡೆಯಾಗುವ ಅನುದಾನದ ಪ್ರಮಾಣವೇ ಇಳಿಕೆಯಾಗಿದೆ, ಇದೆಲ್ಲವೂ ವಿವಿಯ ದಿನನಿತ್ಯದ ಕೆಲಸಗಳಿಗೆ ದೊಡ್ಡ ಅಡ್ಡಿಯಾಗಿ ಕುಳಿತಿದೆ. ಬೇರೆ ವಿವಿಗಳು ಅಧೀನ ಕಾಲೇಜುಗಳಿಂದ ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ ಸೇರಿ ನಾನಾ ಮೂಲಗಳಿಂದ ವಾರ್ಷಿಕ ಕನಿಷ್ಠ 15-20 ಕೋಟಿ ರೂ. ಸಂಪನ್ಮೂಲ ಕ್ರೋಢೀಕರಿಸಲಿವೆ. ಆದರೆ ಕನ್ನಡ ವಿವಿಗೆ ಅನುದಾನ ಪಡೆಯಲು ಬೇರೆ ಮೂಲಗಳಿಲ್ಲ. ಈ ವಿಷಯವು ಬಹಳ ಗಂಭೀರವಾಗಿರುವ ವಿಚಾರದ ಬಗ್ಗೆ.

**:ಉತ್ತರ:**

ಹಂಪಿ, ಕನ್ನಡ ವಿಶ್ವವಿದ್ಯಾಲಯವು ಕನ್ನಡ ನಾಡು, ನುಡಿ, ಸಂಸ್ಕೃತಿಗೆ ಸಂಬಂಧಿಸಿದ ಸಂಶೋಧನೆಗೆ ಮೀಸಲಾದ ವಿಶ್ವವಿದ್ಯಾಲಯವಾಗಿದ್ದು, ಕಳೆದ 32 ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಬಂದಿದೆ. ಕನ್ನಡ ವಿಶ್ವವಿದ್ಯಾಲಯಕ್ಕೆ ಲೆಕ್ಕಶೀರ್ಷಿಕೆ 2202-03-102-0-06 ರಡಿ ಇತ್ತೀಚಿನ ಮೂರು ವರ್ಷಗಳಿಂದ ಒದಗಿಸಿರುವ ಅನುದಾನದ ವಿವರ ಕೆಳಕಂಡಂತಿದೆ:

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಉಪಶೀರ್ಷಿಕೆ | 2022-23ನೇ ಸಾಲಿನಲ್ಲಿ ಒದಗಿಸಲಾದ ಅನುದಾನ | 2023-24ನೇ ಸಾಲಿನಲ್ಲಿ ಒದಗಿಸಲಾದ ಅನುದಾನ | 2024-25ನೇ ಸಾಲಿನಲ್ಲಿ ಒದಗಿಸಲಾದ ಅನುದಾನ |
|---|---|---|---|---|
| 1 | 101-ವೇತನ | 2513.08 | 2759.00 | 2660.08 |
| 2 | 118-ವಿಶ್ರಾಂತಿ ವೇತನ | 1331.00 | 929.66 | 1370.32 |
| 3 | 103-ಸಹಾಯಾನುದಾನ ಸಾಮಾನ್ಯ | 464.00 | 152.00 | 191.50 |
| 4 | 422-ಎಸ್.ಸಿ.ಎಸ್.ಪಿ | 26.00 | 34.00 | 6.02 |
| 5 | 423- ಟಿ.ಎಸ್.ಪಿ | 10.00 | 14.00 | 2.48 |

ಕನ್ನಡ ವಿಶ್ವವಿದ್ಯಾಲಯಕ್ಕೆ 2023-24ನೇ ಸಾಲಿನಲ್ಲಿ ಸದರಿ ವಿಶ್ವವಿದ್ಯಾಲಯಕ್ಕೆ ಬಾಕಿ ಇರುವ ಮಾರ್ಚ್ 2019 ರಿಂದ ಫೆಬ್ರುವರಿ 2024ರ ವರೆಗಿನ ವಿದ್ಯುತ್ ಬಿಲ್ ಬಾಕಿ ಪಾವತಿಸಲು ರೂ.105.74ಲಕ್ಷಗಳ ಅನುದಾನವನ್ನು ದಿನಾಂಕ: 25/03/2024ರ ಆದೇಶದಲ್ಲಿ ಬಿಡುಗಡೆಗೊಳಿಸಲಾಗಿದೆ. ಅಲ್ಲದೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 91 ಹೆಚ್‌ಪಿಯು 2024, ದಿನಾಂಕ: 05/09/2024ರಲ್ಲಿ ವಿಶ್ವವಿದ್ಯಾಲಯಗಳಿಗೆ ಒದಗಿಸಲಾದ ಅಭಿವೃದ್ಧಿ ಅನುದಾನದಡಿಯಲ್ಲಿ ರೂ.100.00ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ.

ಮುಂದುವರೆದು, ಕನ್ನಡ ವಿಶ್ವವಿದ್ಯಾಲಯದ ಹೊರಗುತ್ತಿಗೆ ನೌಕರರ, ತಾತ್ಕಾಲಿಕ ಬೋಧಕ/ಬೋಧಕೇತರ ನೌಕರರ ವೇತನ ಬಾಕಿ ಪಾವತಿಸಲು ಅವಶ್ಯವಿರುವ ರೂ.3,10,98,288/-ಗಳನ್ನು ಬಿಡುಗಡೆಗೊಳಿಸುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.

ಸಂಖ್ಯೆ: ಇಡಿ 154 ಹೆಚ್‌ಪಿಯು 2024)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು